## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 100/2024

**ಸಾಕ್ಷಿಯನ್ನು ದಿಃ 03.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಸೈಯದ್ ಫರಾಜ್ | ಸಿಡಬ್ಲ್ಯೂಃ 5 | ಪಿಡಬ್ಲ್ಯೂಃ 4 |
| ತಂದೆಯ ಹೆಸರು | ಸೈಯದ್ ಹಮಿದ್ | | |
| ವಯಸ್ಸು | 27 ವರ್ಷ | | |
| ಕೆಲಸ | ಕೂಲಿ | | |
| ವಾಸಸ್ಥಳ | ಬೀಚನಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–1 ರಿಂದ 5 ಗೊತ್ತು. ಚಾಸಾ–6 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ–1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ದಿಃ 18.12.2023ರಂದು ಚಾಸಾ–1 ರವರ ಮನೆಯಲ್ಲಿ ಪೋಲಿಸರು ಮಹಜರಿಗೆ ಬಂದಿದ್ದರು. ಆ ಮನೆಯಲ್ಲಿ ಆರೋಪಿತರು ಮತ್ತು ಚಾಸಾ–1 ರವರ ಮಧ್ಯೆ ಗಲಾಟೆಯಾದ ವಿಷಯಕ್ಕೆ ಸಂಬಂಧಿಸಿದಂತೆ ಪೋಲೀಸರು ಮಹಜರಿಗೆ ಬಂದಿದ್ದರು. ಚಾಸಾ–1 ರವರು ಹಾಜರಿದ್ದು, ಘಟನಾ ಸ್ಥಳವನ್ನು ಪೋಲಿಸರಿಗೆ ತೋರಿಸಿದರು. ನನ್ನ ಜೊತೆ ಚಾಸಾ–6 ರವರು ಮತ್ತು ಪೋಲೀಸರು ಇದ್ದರು. ನಿಪಿ–1ರ ಮಹಜರನ್ನು ಬೆಳಿಗ್ಗೆ 11 ರಿಂದ 11–45ರವರೆಗೆ ಮಾಡಿದರು. ಮಹಜರಿನಲ್ಲಿ ಏನು ಬರೆಯಲಾಗಿದೆ ಎಂದು ತಿಳಿದುಕೊಂಡಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. SP ವಕೀಲರಿಂದಃ**

ಆರೋಪಿತರು ಹಾಜರಿದ್ದು, ಆರೋಪಿಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.